ಕರ್ನಾಟಕ ವಿಧಾನ ಪರಿಷತ್ತು

ಮಾನ್ಯ ಸದಸ್ಯರ ಹೆಸರು	:	ಶ್ರೀ ಬಿ.ಕೆ.ಹರಿಪ್ರಸಾದ್
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	**1107**
ಉತ್ತರಿಸಬೇಕಾದ ದಿನಾಂಕ	:	22.12.2021
ಉತ್ತರಿಸಬೇಕಾದ ಸಚಿವರು	:	ವಸತಿ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ	ರಾಜ್ಯದಲ್ಲಿ 'ಸರ್ವರಿಗೂ ಸೂರು' ಎಂಬ ಕಾರ್ಯಕ್ರಮವು ಸರ್ಕಾರದ ಮಟ್ಟದಲ್ಲಿ ಜರೂರಾಗಿ ನಡೆಯುತ್ತಿದೆಯೇ;	ರಾಜ್ಯದಲ್ಲಿನ ಎಲ್ಲಾ ಅರ್ಹ ವಸತಿರಹಿತರಿಗೆ ವಸತಿ/ಸೂರು ಸೌಕರ್ಯ ಒದಗಿಸಲು ಹಲವಾರು ವಸತಿ ಯೋಜನೆಗಳನ್ನು ಜಾರಿಗೆ ತರಲಾಗಿದ್ದು, ಕೆಳಕಂಡ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. **ವಸತಿ ಯೋಜನೆಗಳು :** 1. ಬಸವ ವಸತಿ ಯೋಜನೆ 2. ಡಾ|| ಬಿ.ಆರ್. ಅಂಬೇಡ್ಕರ್ ನಿವಾಸ್ ಯೋಜನೆ (ಗ್ರಾಮೀಣ ಹಾಗೂ ನಗರ) 3. ದೇವರಾಜ ಅರಸು ವಸತಿ ಯೋಜನೆ (ಗ್ರಾಮೀಣ ಹಾಗೂ ನಗರ) 4. ವಾಜಪೇಯಿ ನಗರ ವಸತಿ ಯೋಜನೆ 5. ಪ್ರಧಾನ ಮಂತ್ರಿ ಆವಾಸ್ ಯೋಜನೆ (ಗ್ರಾಮೀಣ) (ಕೇಂದ್ರ ಸರ್ಕಾರದ ಪುರಸ್ಕೃತ) 6. ಪ್ರಧಾನ ಮಂತ್ರಿ ಆವಾಸ್ ಯೋಜನೆ (ನಗರ) (ಕೇಂದ್ರ ಸರ್ಕಾರದ ಪುರಸ್ಕೃತ) 7. ಮುಖ್ಯ ಮಂತ್ರಿಗಳ ಒಂದು ಲಕ್ಷ ಬಹುಮಹಡಿ ಬೆಂಗಳೂರು ವಸತಿ ಯೋಜನೆ. **ನಿವೇಶನ ಯೋಜನೆಗಳು :** 1. ಮುಖ್ಯ ಮಂತ್ರಿಗಳ ಗ್ರಾಮೀಣ ನಿವೇಶನ ಯೋಜನೆ 2. ಮುಖ್ಯ ಮಂತ್ರಿಗಳ ನಗರ ನಿವೇಶನ ಯೋಜನೆ ಮೇಲ್ಕಂಡ ಯೋಜನೆಗಳ ಮೂಲಕ ಸರ್ಕಾರವು ಪ್ರತಿ ವರ್ಷ ಆಯವ್ಯಯದಲ್ಲಿ ಒದಗಿಸುವ ಅನುದಾನಕ್ಕೆ ಅನುಗುಣವಾಗಿ ಎಲ್ಲಾ ವಸತಿರಹಿತರಿಗೆ ಹಂತ ಹಂತವಾಗಿ ವಸತಿ ಸೌಕರ್ಯವನ್ನು ಒದಗಿಸಲಾಗುತ್ತಿದೆ.
ಆ	ಬಡವರಿಗೆ ಸೂರು ಒದಗಿಸುವ ನಿಟ್ಟಿನಲ್ಲಿ ಸರ್ಕಾರವು ಕೈಗೊಂಡಿರುವ ಕಾರ್ಯಕ್ರಮಗಳಾವುವು; ಈ ಕಾರ್ಯಕ್ರಮಗಳನ್ನು ಯಾವ ಕಾಲಮಿತಿಯೊಳಗೆ ಪೂರ್ಣಗೊಳಿಸಲಾಗುವುದು;	

ಇ	ಇದುವರೆವಿಗೂ ರಾಜ್ಯದಲ್ಲಿ ಗುರುತಿಸಿರುವ ಫಲಾನುಭವಿಗಳ ಸಂಖ್ಯೆ ಎಷ್ಟು; ಅದರಲ್ಲಿ ಎಷ್ಟು ಫಲಾನುಭವಿಗಳಿಗೆ ವಸತಿ ಹಂಚಿಕೆ ಮಾಡಲಾಗಿದೆ;	ಕೇಂದ್ರ ಸರ್ಕಾರದ ನಿರ್ದೇಶನದಂತೆ 2018 ರಲ್ಲಿ ರಾಜ್ಯಾದ್ಯಂತ ಗ್ರಾಮೀಣ ಪ್ರದೇಶದಲ್ಲಿ ವಸತಿರಹಿತರ ಹಾಗೂ ನಿವೇಶನರಹಿತರ ಸಮೀಕ್ಷೆಯನ್ನು ಕೈಗೊಳ್ಳಲಾಗಿರುತ್ತದೆ. ಇದರನ್ವಯ ರಾಜ್ಯದಲ್ಲಿ 1871691 ವಸತಿ ರಹಿತರು ಹಾಗೂ 719190 ನಿವೇಶನರಹಿತರಿದ್ದು, ಒಟ್ಟು 2590881 ವಸತಿ/ನಿವೇಶನರಹಿತರಿದ್ದಾರೆ. ರಾಜ್ಯದಾದ್ಯಂತ ನಗರ ಪ್ರದೇಶದಲ್ಲಿ ನಡೆದ ಬೇಡಿಕೆ ಸಮೀಕ್ಷೆಯ ಅನ್ವಯ ರಾಜ್ಯದಲ್ಲಿ 347951 ವಸತಿ ರಹಿತರು ಹಾಗೂ 1067170 ನಿವೇಶನರಹಿತರಿದ್ದು, ಒಟ್ಟು 1415121 ವಸತಿ/ ನಿವೇಶನರಹಿತರಿರುವುದು ಕಂಡು ಬಂದಿದೆ. ರಾಜ್ಯದಲ್ಲಿ 2018ನೇ ಸಾಲಿನಿಂದ ಇಲ್ಲಿಯವರೆಗೂ ವಿವಿಧ ವಸತಿ ಯೋಜನೆಗಳಡಿ ಹಿಂದಿನ ಸಾಲಿನಲ್ಲಿ ಪ್ರಗತಿಯಲ್ಲಿದ್ದ ಮನೆಗಳೂ ಒಳಗೊಂಡಂತೆ ಒಟ್ಟು 632318 ಮನೆಗಳನ್ನು ಪೂರ್ಣಗೊಳಿಸಿ, ಹಂಚಿಕೆ ಮಾಡಲಾಗಿದೆ.
ಈ	ವಸತಿ ಇಲಾಖೆಯಡಿ ಹಂಚಿಕೆ ಮಾಡುವ ನಿವೇಶನಗಳಿಗೆ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲಾಗಿದೆಯೇ; ಹಾಗಿದ್ದಲ್ಲಿ, ನಿವೇಶನಕ್ಕಾಗಿ ಗುರುತಿಸಿರುವ ಒಟ್ಟು ಜಮೀನು ಎಷ್ಟು? (ಜಿಲ್ಲಾವಾರು ಮಾಹಿತಿ ನೀಡುವುದು)	ವಸತಿ ಇಲಾಖೆ / ಆಶ್ರಯ ಯೋಜನೆಯಡಿ ಹಂಚಿಕೆ ಮಾಡುವ ನಿವೇಶನಗಳ ರಚನೆ ಮತ್ತು ಅಭಿವೃದ್ಧಿಗಾಗಿ ಸರ್ಕಾರದ ಆದೇಶ ಸಂಖ್ಯೆ: ವಇ 54 ಹೆಚ್ಎಎಸ್ 2014, ದಿನಾಂಕ: 25.07.2014 ಮತ್ತು 11.08.2014 ರಲ್ಲಿ ನಿವೇಶನಗಳ ರಚನೆ ಮತ್ತು ಅಭಿವೃದ್ಧಿಗೆ ಗ್ರಾಮೀಣ ಪ್ರದೇಶದಲ್ಲಿ ರೂ.3000/-ಗಳು ಹಾಗೂ ನಗರ ಪ್ರದೇಶದಲ್ಲಿ ರೂ.2000/-ಗಳನ್ನು ನಿಗದಿಪಡಿಸಿ ಆದೇಶಿಸಲಾಗಿದ್ದು, ಅದರಂತೆ ಜಿಲ್ಲಾಧಿಕಾರಿಗಳು ಸಲ್ಲಿಸುವ ಪ್ರಸ್ತಾವನೆಯನ್ನಾಧರಿಸಿ ನಿವೇಶನಗಳ ರಚನೆ ಮತ್ತು ಅಭಿವೃದ್ಧಿಗೆ ರಾಜೀವ್ ಗಾಂಧಿ ವಸತಿ ನಿಗಮ ನಿಯಮಿತದಿಂದ ಅನುದಾನ ಬಿಡುಗಡೆ ಮಾಡಲಾಗುತ್ತಿದೆ. ಆಶ್ರಯ ಬಡಾವಣೆಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಮತ್ತು ನಿರ್ವಹಣೆ ಮಾಡುವ ಜವಾಬ್ದಾರಿ ಆಯಾ ಸ್ಥಳೀಯ ಸಂಸ್ಥೆಗಳಿಗೆ ಸೇರಿರುತ್ತದೆ.

		ಅರ್ಹ ನಿವೇಶನರಹಿತ ಕುಟುಂಬಗಳಿಗೆ ಆಶ್ರಯ ಯೋಜನೆಯಡಿ ನಿವೇಶನ ಹಂಚಿಕೆ ಮಾಡಲು ಸರ್ಕಾರಿ ಜಮೀನಿಗೆ ಪ್ರಥಮ ಆದ್ಯತೆ ನೀಡಲಾಗಿದ್ದು ಸರ್ಕಾರಿ ಜಮೀನು ಲಭ್ಯವಿಲ್ಲದ ಕಡೆಗಳಲ್ಲಿ ಮಾತ್ರ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ರಚಿಸಲಾಗಿರುವ ಜಿಲ್ಲಾ ಜಮೀನು ಖರೀದಿ ಸಮಿತಿ ಮೂಲಕ ಖಾಸಗಿ ಜಮೀನು ಖರೀದಿಗೆ ಕ್ರಮ ವಹಿಸಲಾಗುತ್ತಿದೆ. ರಾಜ್ಯಾದ್ಯಂತ ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲಿ ನಿವೇಶನ ಯೋಜನೆಗೆ ಸೂಕ್ತವಾದ ಸರ್ಕಾರಿ ಜಮೀನು ಹಾಗೂ ಖರೀದಿಸಲಾದ ಖಾಸಗಿ ಜಮೀನು ಸೇರಿದಂತೆ ಒಟ್ಟು 5976.84 ಎಕರೆ ಜಮೀನು ಲಭ್ಯವಿರುತ್ತದೆ. ನಿವೇಶನ ಪಡೆದ ಅರ್ಹ ಫಲಾನುಭವಿಗಳಿಗೆ ಆಯವ್ಯಯದಲ್ಲಿ ಒದಗಿಸುವ ಅನುದಾನಕ್ಕೆ ಅನುಗುಣವಾಗಿ ವಿವಿಧ ವಸತಿ ಯೋಜನೆಗಳಡಿ ನಿಗದಿಪಡಿಸುವ ಗುರಿಯಲ್ಲಿ ವಸತಿ ಸೌಕರ್ಯ ಒದಗಿಸಲು ಕ್ರಮ ವಹಿಸಲಾಗುತ್ತಿದೆ. ಲಭ್ಯವಿರುವ ಜಮೀನಿನ ಸಂಬಂಧದಲ್ಲಿ ಜಿಲ್ಲಾವಾರು ವಿವರವನ್ನು ಅನುಬಂಧ-1 ರಲ್ಲಿ ಒದಗಿಸಲಾಗಿದೆ.

(ಸಂಖ್ಯೆ : ವಇ 216 ಹೆಚ್‌ಎಫ್‌ಎ 2021)

(ವಿ. ಸೋಮಣ್ಣ)
ವಸತಿ ಮತ್ತು ಮೂಲಸೌಲಭ್ಯ
ಅಭಿವೃದ್ಧಿ ಸಚಿವರು

ಅನುಬಂಧ- 1

LCQ - 1107

ಲಭ್ಯವಿರುವ ಜಮೀನಿನ ವಿವರ

ಜಿಲ್ಲೆ	ಗ್ರಾಮೀಣ			ನಗರ			ಒಟ್ಟು ವಿಸ್ತೀರ್ಣ (ಎಕರೆ & ಸೆಂಟ್ಸ್)
	ಸರ್ಕಾರ	ಖಾಸಗಿ	ಒಟ್ಟು	ಸರ್ಕಾರ	ಖಾಸಗಿ	ಒಟ್ಟು	
Bagalkot	29.73	8.15	37.88	42.28	7.73	50.01	87.89
Ballari	28.41	26.18	54.59	304.69	0.00	304.69	359.28
Belagavi	5.50	9.50	15.00	75.50	26.45	101.95	116.95
BengaluruRural	169.99	0.00	169.99	32.00	0.00	32.00	201.99
BengaluruUrban	7.30	0.00	7.30	0.00	0.00	0.00	7.30
Bidar	93.85	4.14	97.99	13.25	0.00	13.25	111.24
Chamarajanagar	27.65	6.87	34.52	5.32	18.30	23.62	58.14
Chikkaballapur	390.97	5.38	396.35	92.63	26.30	118.93	515.28
Chikkamagaluru	161.51	7.21	168.72	26.23	0.00	26.23	194.95
Chitradurga	134.31	32.73	167.04	0.00	0.00	0.00	167.04
DakshinaKannada	145.11	0.00	145.11	22.78	0.00	22.78	167.89
Davanagere	24.15	4.85	29.00	21.26	78.86	100.12	129.12
Dharwad	4.15	31.27	35.42	63.96	64.94	128.90	164.32
Gadag	1.05	82.17	83.22	0.00	976.47	976.47	1059.69
Hassan	188.73	3.75	192.48	15.44	0.00	15.44	207.92
Haveri	229.20	43.49	272.69	37.18	10.85	48.03	320.71
Kalaburagi	2.00	10.47	12.47	0.00	66.18	66.18	78.65
Kodagu	10.60	0.00	10.60	8.06	0.00	8.06	18.66
Kolar	91.17	2.00	93.17	58.03	9.03	67.06	160.23
Koppal	5.45	77.26	82.71	0.00	98.01	98.01	180.72
Mandya	135.35	4.98	140.32	32.04	4.14	36.18	176.50
Mysuru	44.84	34.60	79.44	21.05	162.12	183.17	262.61
Raichur	12.58	11.23	23.81	71.47	61.80	133.27	157.08
Ramanagara	12.40	45.93	58.33	30.35	48.59	78.94	137.27
Shivamogga	39.52	2.03	41.55	69.30	0.00	69.30	110.85
Tumakuru	142.82	25.39	168.21	184.83	35.36	220.19	388.40
Udupi	76.13	0.00	76.13	15.00	0.00	15.00	91.13
UttaraKannada	0.00	0.00	0.00	20.00	150.00	170.00	170.00
Vijayapura	0.00	25.95	25.95	45.40	76.42	121.82	147.77
Yadgiri	7.83	3.00	10.83	16.50	0.00	16.50	27.33
Total	**2222.26**	**508.51**	**2730.77**	**1324.53**	**1921.54**	**3246.07**	**5976.84**